ದಿನಾಂಕ: 30ನೇ ಜೂನ್ 2006ರಂದು 13ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 26 ಪ್ರಶ್ನೆಗಳ ಪೈಕಿ 17 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ. (ಅನುಬಂಧ-1)

ಅಧ್ಯಕ್ಷರು : ಮಂಡಿಸಲಾಯಿತು.

2. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ವಿಷಯ: ಕನ್ನಡ ಚಿತ್ರ ನಟಿ ಜಯಮಾಲ ಅಯ್ಯಪ್ಪ ಮುಟ್ಟಿದ್ದು ಅಪರಾಧ ಎನ್ನುವ ಬಗ್ಗೆ.

ಅಧ್ಯಕ್ಷರು : ಈಗ ಶಾಸನ ರಚನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಲಿಖಿತ ಮೂಲಕ ಉತ್ತರಿಸುವಂತಹ ಪ್ರಶ್ನೆಗಳು ಇಲ್ಲಿ ಇಡುತ್ತೀರಿ. ಅದಕ್ಕೆ ಉತ್ತರವೇ ಬರುವುದಿಲ್ಲ.

ಅಧ್ಯಕ್ಷರು : ಉತ್ತರ ಬರಬೇಕಲ್ಲಾ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಉತ್ತರ ಬರುವುದಿಲ್ಲ. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರ ಒಂದು ದಿವಸ ಕೊಡುತ್ತೀರಿ, ಒಂದು ದಿವಸ ಕೊಡುವುದಿಲ್ಲ. ಮೊನ್ನೇ ಕೊಟ್ಟೇ ಇಲ್ಲ.

ಅಧ್ಯಕ್ಷರು : ಕಳುಹಿಸುತ್ತಾರೆ. ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರೆ,....

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಇಡೀ ಮಹಿಳಾ ಸಮುದಾಯಕ್ಕೆ ಅಪಮಾನವಾಗುವಂತಹ ಇವತ್ತು ಒಂದು ವ್ಯವಸ್ಥೆ ಈ ರಾಷ್ಟ್ರದಲ್ಲಿ ನಡೆಯುತ್ತಿದೆ.

ಅಧ್ಯಕ್ಷರು : ನಾನು ಏನು ಹೇಳುವುದೇನೆಂದರೆ, ಈಗ 12 ಗಂಟೆಯಾಯಿತು.

ಶ್ರೀ ಎಸ್.ಎಸ್. ಪಾಟೀಲ್ : ಇದೊಂದು ಬಹಳ ಮಹತ್ವವಾದಂತಹ ವಿಚಾರವಾಗಿದೆ. ಯಾವ ದೇಶದಲ್ಲಿ ಇಲ್ಲದ ಅಸ್ಪಶ್ಯತೆಯು ಇವತ್ತು ನಮ್ಮ ದೇಶದ ಮಹಿಳೆಯರ ಮೇಲೆ ಅದು ನಡೆಯುತ್ತಿದೆ.

ಅಧ್ಯಕ್ಷರು : ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಸೋಮವಾರ ಕಾಲವಕಾಶವನ್ನು ಮಾಡಿ ಕೊಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ಸೋಮವಾರ ಅವಕಾಶವನ್ನು ಮಾಡಿಕೊಡುತ್ತೀರಾ? ಆಯಿತು ಸೋಮವಾರ ಕೊಡಿ. ನಾನು ಸೋಮವಾರ ಮಾತನಾಡುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ : ಇವರ ಕಾಲದಲ್ಲಿ ಮಹಿಳೆಯರು ಮಂತ್ರಿಗಳಾಗಿಲ್ಲ. ಕನಿಷ್ಟ ಮಹಿಳೆಯರ ಪರವಾಗಿ ಮಾತನಾಡುವಂತಹವರಿಗೆ ಅವಕಾಶವನ್ನು ತಾವು ಮಾಡಿಕೊಡಬೇಕು.

ಅಧ್ಯಕ್ಷರು : ಈಗ ಬಿಲ್ ಇಂಟ್ರಡ್ಯೂಸ್ ಮಾಡುತ್ತೇನೆ. ಅದರ ಬಗ್ಗೆ ಚರ್ಚೆಯಾಗಿ ಅದು ಪಾಸಾಗಬೇಕು. ಅದು ಆ ಮನೆಗೆ ಹೋಗಬೇಕು. ಆ ಕಾರಣದಿಂದ ನಾನು ಮಾನ್ಯ ಎಸ್.ಎಸ್. ಪಾಟೀಲ್‌ರವರೆ, ತಮಗೆ ಅದರ ಬಗ್ಗೆ ಮಾತನಾಡುವುದಕ್ಕೆ ಸೋಮವಾರ ಅವಕಾಶ ಕೊಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ಆಯಿತು.

ಅಧ್ಯಕ್ಷರು : ಆಯಿತು. ಮಾನ್ಯ ವಾಟಾಳ್ ನಾಗರಾಜ್‌ರವರೆ, ತಮಗೂ ಹಾಗೂ ಪಾಟೀಲ್‌ರವರಿಗೆ ಎಲ್ಲರಿಗೂ ಸೋಮವಾರ ಅವಕಾಶ ಕೊಡುತ್ತೇನೆ. ದಯಮಾಡಿ ತಾವುಗಳೆಲ್ಲರೂ ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ನಾನು ಕೇಳಲೇ ಇಲ್ಲ.

ಅಧ್ಯಕ್ಷರು : ಇದರ ಬಗ್ಗೆ ಎಲ್ಲರೂ ಕೇಳಿದ್ದಾರೆ. ಈಗ ಬಿಲ್ ಮೇಲೆ ಚರ್ಚೆಯಾಗಬೇಕು. ದಯಮಾಡಿ ಎಲ್ಲರೂ ಸಹಕರಿಸಬೇಕು.

ಶ್ರೀ ವಾಟಾಳ್ ನಾಗರಾಜ್ : ನನಗೆ ಒಂದು ನಿಮಿಷ ಅವಕಾಶವನ್ನು ತಾವು ಮಾಡಿ ಕೊಡಬೇಕು.

ಅಧ್ಯಕ್ಷರು : ಇದರ ಬಗ್ಗೆ ಕೇಳುವವರು ಬಹಳಷ್ಟು ಜನರು ಇದ್ದಾರೆ. ಒಂದು ನಿಮಷ ಎಂದು ಹೇಳುತ್ತಾದ ಹೋದರೆ ಬಹಳ ಹೊತ್ತಾಗಿ ಹೋಗುತ್ತದೆ. ಆಗಲೇ 12 ಗಂಟೆಯಾಗಿದೆ.

ಶ್ರೀ ವಾಟಾಳ್ ನಾಗರಾಜ್ : ನಾನು ಒಂದು ನಿಮಿಷದಲ್ಲಿ ಮುಗಿಸುತ್ತೇನೆ.

ಅಧ್ಯಕ್ಷರು : ಈಗ ನೀವು ಒಂದು ನಿಮಿಷ ಅಂದರೆ ಅವರದ್ದು ಒಂದು ನಿಮಿಷ, ಎಲ್ಲರದ್ದೂ ಒಂದೊಂದು ನಿಮಿಷವಾಗುತ್ತದೆ.

ಶ್ರೀ ಎಸ್.ಎಸ್. ಪಾಟೀಲ್ : ಇದು ಬಹಳ ಮಹತ್ವವಾದ ವಿಚಾರವಾಗಿದೆ.

ಅಧ್ಯಕ್ಷರು : ಆಯಿತು. ಈಗ ಮೊದಲು ಮಾನ್ಯ ಪಾಟೀಲ್‌ರವರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಮಾನ್ಯ ಪಾಟೀಲ್‌ರವರೇ, ತಾವು ಮಾತನಾಡಿ.

ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ) : ಮಾನ್ಯ ಅಧ್ಯಕ್ಷರೆ, ಇದು ಮಹಿಳಾ ಕುಲಕ್ಕೆ ಅಪಮಾನವಾಗಿದೆ. ಸನ್ಮಾನ್ಯ ಅಧ್ಯಕ್ಷರೆ, 12ನೇ ಶತಮಾನದಲ್ಲಿ ಅಣ್ಣಾ ಬಸವಣ್ಣನವರು ಏನು ಹೇಳಿದರು. ಆದರೆ ಇವತ್ತು ಏನು ನಡೆಯುತ್ತಿದೆ. ಸಂವಿಧಾನದ ರಕ್ಷಣೆಗೆ ಅಸ್ಪೃಶ್ಯತೆಯನ್ನು ಇವತ್ತು ಆಚರಣೆಯಲ್ಲಿ ತರುವ ಹಾಗಿಲ್ಲ. ಇವತ್ತು ಮಹಿಳೆಯರು ಅಂದರೆ ಅಲ್ಲಿ ಅಸ್ಪೃಶ್ಯ ಮಹಿಳೆ ಯಾರೂ ಕೂಡ ಅಲ್ಲಿಗೆ ಹೋಗಕೂಡದು. ದಲಿತ ಮಹಿಳೆಯರು ಅಲ್ಲಿಗೆ ಹೋಗುವ ಹಾಗಿಲ್ಲ. ಒಂದು ರೀತಿಯಲ್ಲಿ ಅಸ್ಪೃಶ್ಯತೆ ಆಚರಣೆ ಇವತ್ತು ನಡೆದಿದೆ. ಆದರೆ ಇಡೀ ಮಹಿಳಾ ಕುಲವೇ ನಾಚುವಂತಹ ಅಸ್ಪೃಶ್ಯತೆಯ ಆಚರಣೆ ಇವತ್ತು ಕೇರಳದಲ್ಲಿ ನಡೆದಿದೆ. ಅಣ್ಣಾ ಬಸವಣ್ಣನವರು ಹೇಳುತ್ತಾರೆ. ಆ ದಿವಸ ಸಿದ್ರಾಮೇಶ್ವರರು ಹೇಳಿದ್ದಾರೆ.

"ಹೆಣ್ಣು ಹೆಣ್ಣಲ್ಲ, ಹೆಣ್ಣು ರಾಕ್ಷಸಿ ಅಲ್ಲ, ಹೆಣ್ಣು ಸಾಕ್ಷಾತ್‌ಕಟಿಲ್ ಸಿದ್ದಮಲ್ಲಿಕಾರ್ಜುನ" ಎಂದು ಶರಣರು ಹೇಳುತ್ತಾರೆ.

ಹೆಣ್ಣನ್ನು ದೇವಿಗೆ ಹೋಲಿಸುತ್ತಾರೆ. ತಾಯಿಗೆ ಹೋಲಿಸುತ್ತಾರೆ. ದೇವರಿಗೆ ಹೋಲಿಸುತ್ತಾರೆ. ಸ್ವಲ್ಪ ನನಗೆ ಮಾತನಾಡುವುದಕ್ಕೆ ತಾವು ಟೈಮ್‌ನ್ನು ಕೊಡಬೇಕು. ಅಧ್ಯಕ್ಷರೆ, ಕೇರಳದಲ್ಲಿ ಏನಾಗಿದೆ

ಎಂದರೆ, ಅವರು ಇಲ್ಲಿ ಹೇಳುತ್ತಾರೆ. "ಶಬರಿಮಲೈ ಅಯ್ಯಪ್ಪ ಸ್ವಾಮಿಯ ಸ್ಪರ್ಶಿಸಿದ್ದೇನೆ" ಎಂದು ನಟಿ ಜಯಮಾಲರವರ ಹೇಳಿಕೆ ಶುದ್ಧ ಸುಳ್ಳು ಎಂದು ಶಬರಿಮಲೈ ದೇವಸ್ಥಾನದ ಸಾಂಪ್ರದಾಯಿಕ ಪ್ರಧಾನ ಅರ್ಚಕ ಬಹಳ ಸ್ಪಷ್ಟಪಡಿಸಿದ್ದಾರೆ. ಇಲ್ಲಿ ಇದೆಲ್ಲವನ್ನೂ ಓದುವುದಕ್ಕಾಗುವುದಿಲ್ಲ. ಇದು ಓದುವುದಕ್ಕೆ ಹೋದರೆ ಬಹಳ ಟೈಮ್ ಆಗುತ್ತದೆ.

ಅಧ್ಯಕ್ಷರು : ಅದೇನು ಹೇಳಿ ಸ್ವಾಮಿ? ಈ ಸರ್ಕಾರಕ್ಕೆ ಸಂಬಂಧಪಟ್ಟ ಹಾಗೆ ಏನಾದರೂ ಇದ್ದರೆ ಹೇಳಿ.

ಶ್ರೀ ಎಸ್.ಎಸ್. ಪಾಟೀಲ್ : ಇದು ಈ ಸರ್ಕಾರಕ್ಕೆ ಸಂಬಂಧಪಟ್ಟಿದೆ. ಇದು ನಮ್ಮ ರಾಜ್ಯದ ಮಹಿಳಾ ಸಮಾಜಕ್ಕೆ ಸೇರಿರುವಂತಹದ್ದು.

ಅಧ್ಯಕ್ಷರು : ತಾವು ಶಬರಿಮಲೈ ಎಂದು ಹೇಳಿದಿರಿ. ಅದು ಕೇರಳದಲ್ಲಿದೆ.

ಶ್ರೀ ಎಸ್.ಎಸ್. ಪಾಟೀಲ್ : ಕೇರಳದಲ್ಲಿ ಆದರೂ ಕೂಡ ಅದು ಇಡೀ ದೇಶಕ್ಕೆ ಸಂಬಂಧಪಟ್ಟಂತಹ ವಿಚಾರವಾಗಿದೆ. ಇಡೀ ಮಹಿಳಾ ಸಮಾಜಕ್ಕೆ ಸಂಬಂಧಪಟ್ಟಿದೆ. ವಿಶೇಷವಾಗಿ ಕರ್ನಾಟಕದ ಮಹಿಳೆ ಇದು ಮಹಿಳಾ ಕುಲಕ್ಕೆ ಒಂದು ಅಪಮಾನ. ಸಂವಿಧಾನದ ಅಪಮಾನವಾಗಿದೆ. ಇವತ್ತಿನ ಪತ್ರಿಕೆಯಲ್ಲಿ ಇದರ ಬಗ್ಗೆ ಬಂದಿದೆ. ನಾನು ಇದರ ಬಗ್ಗೆ ಡಿಟೇಲ್ ಆಗಿ ಹೇಳುವುದಕ್ಕೆ ಹೋದರೆ ಟೈಮ್ ಆಗುತ್ತದೆ. ತಾವು ಕೂಡ ಬಸವಧರ್ಮದ ಹಿನ್ನೆಲೆಯಲ್ಲಿ ಬಂದವರಾಗಿದ್ದೀರಿ. ಈ ವಿಚಾರವನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕು. ಸುಮ್ಮನೆ ಹುಡುಗಾಟಿಕೆಯ ಮಾತಲ್ಲ. ಇವತ್ತು ನಾನು ಇದರ ಬಗ್ಗೆ ಖಂಡಿತವಾಗಿ ಹೇಳುತ್ತೇನೆ. ಇದು ಹೀಗೆಯೇ ಮುಂದುವರಿದರೆ, ಸರ್ಕಾರ ಏನಾದರೂ ಇದರ ಬಗ್ಗೆ ಕ್ರಮ ತೆಗೆದುಕೊಳ್ಳದೇ ಹೋದರೆ ಕೇಂದ್ರ ಸರ್ಕಾರದ ಜೊತೆ ಮಾತನಾಡಬೇಕಾಗುತ್ತದೆ. ಅದರ ಬಗ್ಗೆ ಮಾತನಾಡಿ ಏನಾದರೂ ತಿದ್ದುಪಡಿ ಮಾಡಿಸಬೇಕಾಗುತ್ತದೆ. ಒಂದು ವೇಳೆ ಅಲ್ಲಿ ಮಹಿಳೆಯರು ಹೋಗಬಾರದು. ಮಹಿಳೆಯರು ದೇವರನ್ನು ಮುಟ್ಟಬಾರದು ಎಂದು ದೇವಸ್ಥಾನದಲ್ಲಿ ಆ ರೀತಿಯಾಗಿ ಮಾಡಿಕೊಂಡಿದ್ದರೆ, ಖಂಡಿತವಾಗಿ ಅದರ ಬಗ್ಗೆ ತಿದ್ದುಪಡಿಯನ್ನು ಮಾಡಬೇಕಾಗುತ್ತದೆ. ಇದರ ಬಗ್ಗೆ ಕೇಂದ್ರ ಸರ್ಕಾರದ ಜೊತೆ ಮಾತನಾಡಿ, ಇದರ ಬಗ್ಗೆ ತಿದ್ದುಪಡಿ ಮಾಡಿಸಬೇಕು. ಇದನ್ನು ನಾನು ಓದುತ್ತೇನೆ.

ಅಧ್ಯಕ್ಷರು : ಇದರ ಬಗ್ಗೆ ಸರ್ಕಾರದ ಗಮನ ಸೆಳೆಯುತ್ತೇನೆ. ಸರ್ಕಾರದ ಪರವಾಗಿ....

ಶ್ರೀ ಜೆ.ಸಿ. ಮಾಧುಸ್ವಾಮಿ : ಯಾವ ಸರ್ಕಾರ, ಅದು ಯಾವ ರಾಜ್ಯದಲ್ಲಿ ನಡೆದಿದೆ.

(ಅಡಚಣೆ)

ಅಧ್ಯಕ್ಷರು : ಅವರು ಕೇಂದ್ರ ಸರ್ಕಾರದ ಬಗ್ಗೆ ಮಾತನಾಡಿದರು.

ಶ್ರೀ ಜೆ.ಸಿ. ಮಾಧುಸ್ವಾಮಿ : ನೀವು ಏನು ಮಾತನಾಡುತ್ತಿದ್ದೀರಿ.

ಶ್ರೀ ಎಸ್.ಎಸ್. ಪಾಟೀಲ್ : ಇದು ಮಹಿಳೆಯರ ಪ್ರಶ್ನೆ. ಯಾವ ಸರ್ಕಾರ ಏನು ಎಂದು ಮಾತನಾಡುತ್ತೀರಿ? ಇದು ಮಹಿಳೆಯ ಪ್ರಶ್ನೆಯಾಗಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಇದು ಕೇರಳಾ ಸ್ಟೇಟ್ ಅಸೆಂಬ್ಲಿಯಲ್ಲಿ ಮಾತನಾಡಬೇಕು.

(ಅಡಚಣೆ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್) : ಸರ್, ಸ್ವಲ್ಪ ಕೇಳಿ, ಗೋವಾದಲ್ಲಿ ಕನ್ನಡಿಗರಿಗೆ ತೊಂದರೆಯಾದರೆ ನಾವು ಇಲ್ಲಿ ಮಾತನಾಡುವುದಿಲ್ಲವೇ? ಬಾಂಬೆಯಲ್ಲಿ ಅಥವಾ ಮಹಾರಾಷ್ಟ್ರದಲ್ಲಿ ಕನ್ನಡಿಗರಿಗೆ ತೊಂದರೆಯಾದರೆ ನಾವು ಇಲ್ಲಿ ಮಾತನಾಡುವುದಿಲ್ಲವೇ? ಕಾಸರಗೋಡಿನಲ್ಲಿ ತೊಂದರೆಯಾದರೆ, ನಾವು ಇಲ್ಲಿ ಮಾತನಾಡುವುದಿಲ್ಲವೇ? ಅದೆ ರೀತಿಯಾಗಿ ಇವತ್ತಿನ ದಿವಸ ಕೇರಳದಲ್ಲಿ ಅಯ್ಯಪ್ಪನ ದೇವಸ್ಥಾನಕ್ಕೆ ಹೋಗಿದ್ದಕ್ಕಾಗಿ ಅಲ್ಲಿ ಅವಮಾನವಾಗಿದೆಯೆಂಬ ವಿಚಾರ ಪ್ರಸ್ತಾಪಕ್ಕೆ ಬಂದರೆ ಅದು ನಮಗೆ ಸಂಬಂಧವಿಲ್ಲವೆಂದರೆ ಹೇಗೆ? ಇಡೀ ದೇಶದಲ್ಲಿ ಅನೇಕ ಸಾರಿ ಕಾನೂನಿನಲ್ಲಿ ತಿದ್ದುಪಡಿ ಮಾಡಬೇಕಾಗುತ್ತದೆ. ಅದರ ಇನಿಷಿಯೇಟೀವ್ ಅನ್ನು ಕರ್ನಾಟಕ ತೆಗೆದುಕೊಳ್ಳಬಹುದು, ಮಹಾರಾಷ್ಟ್ರ ಅಥವಾ ಕೇರಳ ತೆಗೆದುಕೊಳ್ಳಬಹುದು, ಯಾವ ರಾಜ್ಯ ಪ್ರಗತಿಪರ ಎಂದು ಹೇಳಿಕೊಳ್ಳುತ್ತದೋ ಕಮ್ಯುನಿಸ್ಟ್ ರಾಜ್ಯದಲ್ಲಿಯೂ ಕೂಡ ಇಂಥ ವ್ಯತ್ಯಾಸಗಳು, ಇಂಥ ವಿಪರೀತವಾದಂಥ ವಾತಾವರಣವಿದ್ದರೆ ಇದು ಸರಿಯೇ? ಇದನ್ನು ನಾವು ಸಹಿಸಿಕೊಂಡು ಹೋಗಬೇಕೆ? ನಮ್ಮ ರಾಜ್ಯದಿಂದ ಹೋದಂತಹ ಹೆಣ್ಣುಮಕ್ಕಳಿಗೆ ಆದಂಥ ಅವಮಾನವನ್ನು ಸಹಿಸಿಕೊಳ್ಳಬೇಕೆ? ಈ ಪ್ರಶ್ನೆಯಿದೆ, ಅದಕ್ಕೆ ಇದನ್ನು ಎಲ್ಲಿಂದಲ್ಲೋ ತಂದು ಎಲ್ಲೋ ಚರ್ಚೆ ಮಾಡಬೇಕೇ ಎಂದರೆ ಹೇಗೆ? ತಮಗೂ ಗೊತ್ತಿದೆ, ಈ ಹಿಂದೆ ಒಂದು ಸಾರಿ ರಾಯಚೂರಿನಲ್ಲಿ ಮಂತ್ರಿಗಳು ಬಟ್ಟೆ ಕಳಚಿಕೊಂಡು ಹೋಗಿಲ್ಲವೆಂದು ನಿಷೇಧಿಸಿರುತ್ತಾರೆ, ಅದನ್ನು ನಿಲ್ಲಿಸಬೇಕು.

ಅಧ್ಯಕ್ಷರು : ಆಯಿತು. ಸರ್ಕಾರದ ಪರವಾಗಿ ಉತ್ತರವನ್ನು ಕೊಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಸರ್, ಅದೇ ವಿಚಾರವಾಗಿ ನಾನು ಒಂದು ನಿಮಿಷ ಮಾತನಾಡುತ್ತೇನೆ. ಒಂದು ನಿಮಿಷ ಮುಜರಾಯಿ ಸಚಿವರು ಕೇಳಬೇಕು. ಮಾನ್ಯ ಅಧ್ಯಕ್ಷರೇ, ಈಗ ಏನಾಗಿದೆಯೆಂದು ಹೇಳಿದರೆ, ಇದು ಕೇವಲ ಯಾವುದೋ ಕೇರಳ ರಾಜ್ಯಕ್ಕೆ ಸಂಬಂಧಪಟ್ಟಿದ್ದು ಅಥವಾ ಕರ್ನಾಟಕ ರಾಜ್ಯಕ್ಕೆ ಸಂಬಂಧಪಟ್ಟಿದ್ದು ಅಲ್ಲ. ಬಹುಶಃ ಇಡೀ ದೇಶಕ್ಕೆ ಸಂಬಂಧಪಟ್ಟಂಥ ವಿಚಾರ. ನಮ್ಮ ರಾಜ್ಯ ಈ ವಿಚಾರವನ್ನು ಅಷ್ಟು ಲಘುವಾಗಿ ಗಣನೆಗೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಬಹಳ ತೀವ್ರವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಅಲ್ಲಿನ ದೇವಸ್ಥಾನಗಳ ಸಚಿವರು ಸುಧಾಕರ ಎನ್ನತಕ್ಕಂಥವರು, ನಮ್ಮ ಕರ್ನಾಟಕದ ಕನ್ನಡದ ಚಿತ್ರನಟಿ ಜಯಮಾಲಾರವರು ಆ ಅಯ್ಯಪ್ಪಸ್ವಾಮಿ ದೇವಸ್ಥಾನಕ್ಕೆ ಇಪ್ಪತ್ತು ವರ್ಷಗಳ ಹಿಂದೆ ಹೋದಾಗ ಕಾಲಿಗೆ ಬಿದ್ದಿರುವುದು ಅಪರಾಧ, ಅದರ ಬಗ್ಗೆ ಸಮಗ್ರವಾದ ತನಿಖೆಯಾಗಬೇಕು ಮತ್ತು ಶಿಕ್ಷೆಯಾಗಬೇಕೆನ್ನುವ ಮಾತನ್ನು ಅವರು ಆ ಶಾಸನಸಭೆಯಲ್ಲಿ ಹೇಳಿದ್ದಾರೆ. ಅವರ ಶಾಸನಸಭೆಯಲ್ಲಿ ಕರ್ನಾಟಕದ ಕನ್ನಡದ ಚಿತ್ರನಟಿಯ ಮೇಲೆ ಮಾತನಾಡಿರುವಾಗ ನಾವು ಸುಮ್ಮನೆ ಇಲ್ಲಿ ಕುಳಿತುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಹಾಗಾಗಿ ತಮಗೆ ನಾನೇನು ಹೇಳುತ್ತಿದ್ದೇನೆ ಎಂದರೆ ಪ್ರಾಮಾಣಿಕವಾಗಿ ಅಲ್ಲಿನ ದೇವಸ್ಥಾನದ ದೇವರ ಕಾಲನ್ನೇ

ಮುಟ್ಟಲಿಕ್ಕಾಗುವುದಿಲ್ಲ ಎನ್ನುವುದಾದರೆ, ಮಹಿಳೆಯರೇ ಆ ದೇವಸ್ಥಾನಕ್ಕೆ ಹೋಗಲಿಕ್ಕಾಗುವುದಿಲ್ಲ ಎನ್ನುವುದಾದರೆ, ಇದು ಬಹಳ ಅಪಾಯಕಾರಿ ಬೆಳವಣಿಗೆ, ಇದರ ಬಗ್ಗೆ ನಾವು ಶೋಷಿತ ವರ್ಗ, ಸಾಮಾನ್ಯ ಜನ, ಇದರಲ್ಲಿ ಮಡಿವಂತರಾಗುವುದಕ್ಕಾಗುವುದಿಲ್ಲ. ಇದರಲ್ಲಿ ಅರ್ಥವಿಲ್ಲ, ದೇವಸ್ಥಾನಕ್ಕೆ ಮಹಿಳೆಯರು ಹೋಗಬೇಕಾಗುತ್ತದೆ. ಪುರುಷರು ಹೋಗಬೇಕಾಗುತ್ತದೆ. ಬಹುಶಃ ಕರ್ನಾಟಕ ರಾಜ್ಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಲಕ್ಷಾಂತರ ಜನ ಭಕ್ತರು ಅಯ್ಯಪ್ಪ ಸ್ವಾಮಿ ದೇವಸ್ಥಾನಕ್ಕೆ ಹೋಗುತ್ತಾರೆ. ಕೇರಳ ರಾಜ್ಯಕ್ಕಿಂತ ಹೆಚ್ಚಾಗಿ ಕರ್ನಾಟಕದಿಂದ ಹೆಚ್ಚಿನ ಜನರು ಅಲ್ಲಿಗೆ ಹೋಗುತ್ತಿದ್ದಾರೆ. ಆದ್ದರಿಂದ ತಮಗೆ ನಾನು ಹೇಳುತ್ತಿದ್ದೇನೆ. ಇದನ್ನು ತಾವು ತೀವ್ರವಾಗಿ ಗಣನೆಗೆ ತೆಗೆದುಕೊಳ್ಳಬೇಕು. ಶಿಕ್ಷೆಯ ಪ್ರಶ್ನೆ ಅಲ್ಲವೇ ಅಲ್ಲ. ಜಯಮಾಲಾ ಹೇಳಿರುವುದು ಏನು? ಪ್ರಾಮಾಣಿಕವಾಗಿ ನನ್ನ ಯಜಮಾನರು ಅನಾರೋಗ್ಯರಾಗಿದ್ದಾಗ ಆ ದೇವಸ್ಥಾನಕ್ಕೆ ಹರಕೆ ಹೊತ್ತು ಹೋಗಿದ್ದೆ. ಹೋದಾಗ ಜನರ ಗುಂಪಿನ ನೂಕುನುಗ್ಗಲಿನಲ್ಲಿ ಕೆಳಗೆ ಬಿದ್ದೆ, ಕೆಳಗೆ ಬಿದ್ದ ತಕ್ಷಣ ದೈವವಶಾತ್ ನನಗೆ ಆ ದೇವರ ಪಾದ ಸಿಕ್ಕಿತು, ಆ ಪಾದಕ್ಕೆ ನಮಸ್ಕಾರ ಮಾಡಿದೆ. ಆದ್ದರಿಂದ ಅವರು ಸತ್ಯವನ್ನು ಹೇಳಿರುವುದರಿಂದ ಅಲ್ಲಿಯ ರಾಜಕೀಯ, ಆ ದೇವಸ್ಥಾನದ ಪುರೋಹಿತರ ರಾಜಕೀಯದಿಂದ ಇದು ಒಬ್ಬ ಕರ್ನಾಟಕದ ಚಲನಚಿತ್ರ ನಟಿಯ ಮೇಲೆ ನಡೆದಿರತಕ್ಕಂಥ ದೊಡ್ಡ ಗಧಾಪ್ರಹಾರ, ಇದನ್ನು ಇಡೀ ದೇಶವೇ ವಿರೋಧ ಮಾಡಬೇಕಾಗುತ್ತದೆ. ಮತ್ತು ಆ ದೇವಸ್ಥಾನ ಕೇವಲ ಮಡಿವಂತಿಕೆಯಾಗಬಾರದು. ಅಲ್ಲಿಗೆ ಮಹಿಳೆಯರು ಬರಬಾರದು ಎಂದರೆ ಏನು ಕಾರಣ? ಏತಕ್ಕೆ ಮಹಿಳೆಯರು ಬರಬಾರದು? ಇಡೀ ದೇಶದಲ್ಲಿರುವ ಎಲ್ಲಾ ದೇವಸ್ಥಾನಕ್ಕೂ ಮಹಿಳೆಯರೂ ಹೋಗಬೇಕು. ಮಹಿಳೆಯರನ್ನು ಹೊರತುಪಡಿಸಿ ಯಾರು ಇರಲಿಕ್ಕೆ ಸಾಧ್ಯವಿಲ್ಲ. ಆದ್ದರಿಂದ ಅನೇಕ ವಚನಗಳಲ್ಲಿ ಅದು ಅಕ್ಕಮಹಾದೇವಿ, ಬಸವೇಶ್ವರರ ವಚನವಿರಬಹುದು, ಮಹಿಳೆಯರಿಗೆ ಕೊಟ್ಟಿರತಕ್ಕಂಥ ಸ್ಥಾನ ಮಾನ ಬಹಳ ಹಿರಿಮೆಯದ್ದಾಗಿದೆ. ಆದ್ದರಿಂದ ಈ ವಿಚಾರದಲ್ಲಿ ಸಮಗ್ರವಾಗಿ ಚರ್ಚೆಯಾಗಬೇಕಾಗುತ್ತದೆ ಮತ್ತು ಯಾವದೇ ಶಿಕ್ಷೆಯನ್ನು ಅವರು ನೀಡಲಿಕ್ಕೆ ಅಧಿಕಾರವಿಲ್ಲ. ಅದಕ್ಕೋಸ್ಕರವಾಗಿ ಸರ್ಕಾರ ಸ್ಪಷ್ಟವಾಗಿ ಒಂದು ತೀರ್ಮಾನಕ್ಕೆ ಬರಬೇಕಾಗುತ್ತದೆ. ಯಾವುದೇ ಕಾರಣಕ್ಕೂ ಜಯಮಾಲಾರವರಿಗೆ ತೊಂದರೆಯಾಗಬಾರದು ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

(ಅಡಚಣೆ)

ಅಧ್ಯಕ್ಷರು : ಮಾನ್ಯ ಮುಜರಾಯಿ ಸಚಿವರು, ನೋಡಿ. ಶೂನ್ಯವೇಳೆಯಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿರುವುದರಿಂದ ಇದಕ್ಕೆ ಚರ್ಚೆಗೆ ಅವಕಾಶವಿಲ್ಲ ಪಾಟೀಲರೇ. ನೀವು ಅವರ ಗಮನಕ್ಕೆ ತಂದಿದ್ದೀರಿ. ಅದಕ್ಕೆ ಅವರು ಉತ್ತರ ಹೇಳುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಅವರು ಉತ್ತರವನ್ನು ಕೊಡುತ್ತಾರೆ.

ಶ್ರೀ ಎಸ್.ಎಸ್. ಪಾಟೀಲ್ : ನೋಡಿ ಯಡಿಯೂರಪ್ಪನವರೇ, ಇದರ ಬಗ್ಗೆ ಡಿಟೇಲ್ ಆಗಿ ಚರ್ಚೆಯಾಗಬೇಕಾಗುತ್ತದೆ.

(ಅಡಚಣೆ)

ಶ್ರೀ ಕೆ. ಶ್ರೀನಿವಾಸಗೌಡ : ಮೊದಲು ಅವರು ಎದ್ದುನಿಂತರು.

ಅಧ್ಯಕ್ಷರು : ನೋಡಿ ಶ್ರೀನಿವಾಸಗೌಡರೇ, ತಾವು ಹಿರಿಯ ಸದಸ್ಯರು, ಮೊದಲು ಅವರ ವಿಚಾರವನ್ನು ಪ್ರಸ್ತಾಪ ಮಾಡಿದರು. ವಾಟಾಳ್ ನಾಗರಾಜ್‌ರವರು ಅದೇ ವಿಚಾರದ ಬಗ್ಗೆ ಮಾತನಾಡಬೇಕೆಂದಾಗ ನಾನು ಅವರಿಗೆ ಅವಕಾಶ ಕೊಟ್ಟಿದ್ದೆನು. ಶ್ರೀನಿವಾಸಗೌಡರೇ, ನೀವು ಇಲ್ಲಿ ವಕೀಲಿ ಮಾಡತಕ್ಕಂಥ ಅಗತ್ಯವಿಲ್ಲ. ಅವರು ವಿಷಯ ಎತ್ತಿದರು. ಮೊದಲು ಎದ್ದು ನಿಂತುಕೊಂಡರು ಎಂದು ಅವರಿಗೆ ಅವಕಾಶವನ್ನು ಕೊಟ್ಟೆ. ಅವರು ಪ್ರಸ್ತಾಪ ಮಾಡಿದ್ದಾರೆ. ವಾಟಾಳ್‌ರವರು ಸಹ ನನ್ನನ್ನು ಕೇಳಿದರು. ಅದೇ ವಿಚಾರ ಎಂದಾಗ ಮತ್ತೇನು, ಚರ್ಚೆಗೆ ಅವಕಾಶವಿಲ್ಲ. ಏನಿದು, ನೀವೆಲ್ಲಾ ನಿಂತುಕೊಂಡು ವಕೀಲಿ ಮಾಡಿಕೊಳ್ಳುವುದು, ಇನ್ನೊಂದು ಮಾಡುವುದು, ಸಭೆಯ ದಿಕ್ಕನ್ನು ಬದಲಾಯಿಸುವುದು, ಇದೆಲ್ಲಾ ಕಾಲಹರಣ ಮಾಡುವುದು, ಕಾಲಹರಣ ಮಾಡಬೇಕೆಂದಿದ್ದರೆ ಹೇಳಿಬಿಡಿ. ಈಗ ನೀವೆಲ್ಲಾ ಮಾತನಾಡಲಿಕ್ಕೆ ವಕೀಲಿ ಆಗಬೇಕು. ಸಭೆ ಈ ರೀತಿ ನಡೆಯಬೇಕೇ?

(ಅಡಚಣೆ)

ಶ್ರೀ ಎಸ್.ಎಸ್. ಪಾಟೀಲ್ : ಅಧ್ಯಕ್ಷರೇ, ತಾವು ಶೂನ್ಯವೇಳೆಯಲ್ಲಿ ಮಾತನಾಡಲಿಕ್ಕೆ ಅವಕಾಶ ಕೊಡುವುದಿಲ್ಲವೆಂದರೆ ಅದನ್ನು ನಾನು ಒಪ್ಪುತ್ತೇನೆ. ಅದಕ್ಕೆ ಅರ್ಧಗಂಟೆ ಕಾಲಾವಧಿಯಲ್ಲಿ ಚರ್ಚೆ ಮಾಡಲಿಕ್ಕೆ ನಾನು ಪತ್ರವನ್ನು ಕೊಡುತ್ತೇನೆ. ಆಗ ಅವಕಾಶವನ್ನು ಕೊಡಿ.

ಅಧ್ಯಕ್ಷರು : ಈಗ ಮಾತನಾಡಿದ್ದೀರಿ. ಸರ್ಕಾರದಿಂದ ಉತ್ತರ ಕೊಡುವ ಆ ಸ್ಟೇಜ್‌ನಲ್ಲಿ ಮಾಧುಸ್ವಾಮಿಯವರು ಬೇರೆ ವಿಚಾರವನ್ನು ಎತ್ತಿದರು. ಅದಕ್ಕೆ ಖರ್ಗೆಯವರು ಎದ್ದುನಿಂತು ಆ ವಿಚಾರದ ಬಗ್ಗೆ ಸ್ಪಷ್ಟೀಕರಣ ಮಾಡಿದರು. ವಾಟಾಳ್ ನಾಗರಾಜ್‌ರವರು ಅವಕಾಶವನ್ನು ಕೇಳಿದ್ದರು. ನಾನು ಅದೇ ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆಂದರು. ಅವರಿಗೂ ಅವಕಾಶವನ್ನು ಕೊಟ್ಟೆ. ನೀವು ಮೊದಲು ಪ್ರಸ್ತಾಪ ಮಾಡಿದ್ದೀರಿ. ಮತ್ತೆ ಮತ್ತೆ ಅವಕಾಶ ಕೊಡಿ ಎಂದರೆ ಹೇಗೆ? I can't understand, ಶೂನ್ಯವೇಳೆಯಲ್ಲಿ ಚರ್ಚೆಗೆ ಅವಕಾಶವಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ಅದನ್ನು ನಾನು ಒಪ್ಪುತ್ತೇನೆ. ಈ ವಿಷಯದ ಬಗ್ಗೆ ಬಹಳ ಹೊತ್ತು ಶೂನ್ಯವೇಳೆಯಲ್ಲಿ ಚರ್ಚೆ ಮಾಡಲಿಕ್ಕೆ ಬರುವುದಿಲ್ಲ. ಹಾಗಾಗಿ ನಾನೊಂದು ಲೆಟರ್ ಕಳುಹಿಸುತ್ತೇನೆ. ಅರ್ಧಗಂಟೆ ಕಾಲಾವಧಿಯಲ್ಲಿ ಚರ್ಚೆಗೆ ದಯವಿಟ್ಟು ಅವಕಾಶವನ್ನು ಮಾಡಿಕೊಡಿ.

ಅಧ್ಯಕ್ಷರು : ಆಯಿತು. ಬೇರೆ ಒಂದು ಲೆಟರ್ ಕಳುಹಿಸಿ, ಅವಕಾಶವನ್ನು ಕೊಡುತ್ತೇನೆ.

(ಅಡಚಣೆ)

ಶ್ರೀ ವಾಟಾಳ್ ನಾಗರಾಜ್ : ಈಗ ಮುಜರಾಯಿ ಸಚಿವರಿಂದ ಉತ್ತರ ಕೊಡಿಸಿ.

ಅಧ್ಯಕ್ಷರು : ಈಗ ಅರ್ಧಗಂಟೆಯ ಕಾಲಾವಧಿಯಲ್ಲಿ ಚರ್ಚೆಗೆ ಅವಕಾಶ ಕೊಡಿ ಎಂದು ಹೇಳಿದ್ದಾರಲ್ಲಾ.

ಶ್ರೀ ಜೆ.ಸಿ. ಮಾಧುಸ್ವಾಮಿ : ಈಗ ನಮ್ಮ ರಾಜ್ಯದಲ್ಲಿರುವ ಎಲ್ಲಾ ದೇವಸ್ಥಾನಗಳಲ್ಲಿರುವ ದೇವರುಗಳ ಕಾಲನ್ನು ಮುಟ್ಟಲಿಕ್ಕೆ ರಾಜ್ಯ ಸರ್ಕಾರ ಮೊದಲು ಅವಕಾಶವನ್ನು ಮಾಡಿ ಕೊಡಲಿ. ಆಮೇಲೆ ಬೇರೆ ರಾಜ್ಯದ ದೇವಸ್ಥಾನಗಳ ಬಗ್ಗೆ ಮಾತನಾಡೋಣ.

(ಅಡಚಣೆ)

ಅಧ್ಯಕ್ಷರು : ಈಗ ವಿಶ್ವೇಶ್ವರ ಹೆಗಡೆಯವರೇ, ಈ ವಿಚಾರದ ಗಂಭೀರತೆಯನ್ನು ಅರ್ಥ ಮಾಡಿಕೊಳ್ಳಿ. ಮಾನ್ಯ ಉನ್ನತ ಶಿಕ್ಷಣ ಸಚಿವರು ನಿಂತಿದ್ದಾರೆ. ಬಿಲ್ ಮಂಡನೆಯಾಗಿ ಮೇಲ್ಮನೆಗೆ ಬೇರೆ ಹೋಗಬೇಕು.

(ಅಡಚಣೆ)

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ಮೊದಲು ಕರ್ನಾಟಕ ರಾಜ್ಯದಲ್ಲಿರುವ ದೇವಸ್ಥಾನಗಳಲ್ಲಿರುವ ವಿಗ್ರಹಗಳನ್ನು ಮುಟ್ಟಲಿಕ್ಕೆ ಕರ್ನಾಟಕ ಸರ್ಕಾರ ಅವಕಾಶ ಮಾಡಿಕೊಡಬೇಕು.

ಶ್ರೀ ಕೆ. ಶ್ರೀನಿವಾಸಗೌಡ : ಎಲ್ಲಾ ಶೂದ್ರರೂ ಸಹ ಗರ್ಭಗುಡಿಯೊಳಗೆ ಪ್ರವೇಶಿಸಲಿಕ್ಕೆ ಅವಕಾಶ ಮಾಡಿಕೊಡಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಈಗ ಕರ್ನಾಟಕ ರಾಜ್ಯದಲ್ಲೇ ದಲಿತರಿಗೆ ದೇವರಗುಡಿಗೆ ಪ್ರವೇಶವಿಲ್ಲ. ಮೊದಲು ಅದರ ಬಗ್ಗೆ ಮಾತನಾಡಿ ಎಂದರೆ ಎಲ್ಲೋ ಇರುವ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಬಗ್ಗೆ ಮಾತನಾಡುವುದೇ?

(ಅಡಚಣೆ)

ಶ್ರೀ ಕೆ. ಶ್ರೀನಿವಾಸಗೌಡ : ಮೊದಲು ನಮ್ಮಲ್ಲಿರುವ ದೇವಸ್ಥಾನಗಳಿಗೆ ಶೂದ್ರರಿಗೆ ಪ್ರವೇಶ ಮಾಡಲಿಕ್ಕೆ ಅವಕಾಶ ಮಾಡಿದರೆ ಆಗ ನಮ್ಮ ರಾಜ್ಯವೂ ರಾಮರಾಜ್ಯವಾಗುತ್ತದೆ.

(ಅಡಚಣೆ)

ಅಧ್ಯಕ್ಷರು : ಈಗ ಮಾನ್ಯ ಪಾಟೀಲರು ನೋಟಿಸ್ ಕೊಡುತ್ತೇನೆಂದು ಹೇಳಿದ್ದಾರೆ. ಅದರ ಬಗ್ಗೆ ಅರ್ಧಗಂಟೆ ಕಾಲಾವಧಿಯಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ. ಇದು ಬಹಳ ಗಂಭೀರವಾದ ಪ್ರಶ್ನೆ. ಅದರ ಬಗ್ಗೆ ಚರ್ಚೆಯಾಗಲಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಈಗ ಕರ್ನಾಟಕ ರಾಜ್ಯದಲ್ಲಿರುವ ದೇವಸ್ಥಾನಗಳ ಗರ್ಭಗುಡಿಗಳಿಗೆ ಶೂದ್ರರಿಗೆ ಪ್ರವೇಶವಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಯಾವ ಶೂದ್ರರಿಗೂ ಇಲ್ಲ. ನಮಗೂ ಸಹ ಪ್ರವೇಶವಿಲ್ಲ. ಮೊದಲು ನಮ್ಮ ರಾಜ್ಯದ ಬಗ್ಗೆ ಚರ್ಚೆ ಮಾಡಿ ನಂತರ ಬೇರೆ ರಾಜ್ಯಗಳ ಬಗ್ಗೆ ಚರ್ಚೆ ಮಾಡೋಣ.

ಅಧ್ಯಕ್ಷರು : ಮಾಧುಸ್ವಾಮಿಯವರು ನಮಗೂ ಇಲ್ಲವೆಂದರೆ ನಾವು ಲಿಂಗವಂತರು. ಲಿಂಗ ಹಾಕಿದ್ದೇವೆ. ನಾವು ಶೂದ್ರರಲ್ಲವೆಂದು ಅವರು ಹೇಳುವುದು.

(ಅಡಚಣೆ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಧ್ಯಕ್ಷರೇ, ಮೊದಲು ನಮ್ಮ ರಾಜ್ಯದ ದೇವಸ್ಥಾನಗಳಿಗೆ ಪ್ರವೇಶಕ್ಕೆ ಅವಕಾಶ ನೀಡುವ ಬಗ್ಗೆ ಚರ್ಚೆಯಾಗಬೇಕೆಂದರೆ ಎಲ್ಲೋ ಅಯ್ಯಪ್ಪ ಸ್ವಾಮಿ ದೇವಸ್ಥಾನದ ವಿಚಾರದ ಬಗ್ಗೆ ಮಾತನಾಡುತ್ತಿದ್ದೀರಲ್ಲಾ.

ಅಧ್ಯಕ್ಷರು : ಈಗ ನೋಟೀಸ್ ಕೊಡುತ್ತೇನೆ ಎಂದು ಪಾಟೀಲರು ಹೇಳಿದ್ದಾರೆ. ಅದರ ಬಗ್ಗೆ ನಾನು ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ಈಗ ಮುಜರಾಯಿ ಸಚಿವರು ಉತ್ತರವನ್ನು ಕೊಟ್ಟುಬಿಡಲಿ.

ಅಧ್ಯಕ್ಷರು : ಹೇಳಿ ಸ್ವಾಮಿ. ಈಗ ಸದ್ಯಕ್ಕೆ ಉತ್ತರವನ್ನು ಹೇಳಿ. ಆಮೇಲೆ ಚರ್ಚೆಯಾಗಲಿ. ಎಲ್ಲರೂ ಭಾಗವಹಿಸಲಿ.

ಶ್ರೀ ಕೆ. ಶ್ರೀನಿವಾಸಗೌಡ : ಅರ್ಧಗಂಟೆ ಕಾಲಾವಧಿಗೆ ಚರ್ಚೆಗೆ ಅವಕಾಶ ಕೊಟ್ಟು ನೀವು ಉತ್ತರ ಕೊಡಿ ಎಂದರೆ ಏನಿದು, ಸ್ವಲ್ಪ ದಯವಿಟ್ಟು ಗಮನಿಸಿ, ವಾಟಾಳ್ ನಾಗರಾಜ್‌ರವರು ಹಿರಿಯ ಸದಸ್ಯರು, ಅವರು ಉತ್ತರ ಕೊಡಿ ಎಂದರು, ನಾನು ಹೇಳುತ್ತಿದ್ದೇನೆ. ನೀವು ಆ ವಿಚಾರದ ಬಗ್ಗೆ ಅರ್ಧಗಂಟೆ ಕಾಲಾವಧಿಯಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆಂದ ಮೇಲೆ ಉತ್ತರವನ್ನು ಮಾನ್ಯ ಸಚಿವರು ಅಂದೇ ಕೊಡಲಿ.

(ಅಡಚಣೆ)

ಅಧ್ಯಕ್ಷರು : ಆಯಿತು. ಸೋಮವಾರದಂದು ಈ ವಿಷಯದ ಮೇಲೆ ಚರ್ಚೆಗೆ ಅವಕಾಶವನ್ನು ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ, ಒಬ್ಬ ಕನ್ನಡ ನಟಿಗೆ ಅನ್ಯಾಯವಾಗಿದೆ. ಅಪಮಾನವಾಗಿದೆ, ಇದರ ಬಗ್ಗೆ ಸರ್ಕಾರ ಮೌನದಿಂದ ಕುಳಿತಿರುವುದು ಸರಿಯಲ್ಲ.

ಅಧ್ಯಕ್ಷರು : ಸರ್ಕಾರ ಮೌನವಾಗಿ ಕುಳಿತಿಲ್ಲ.

(ಅಡಚಣೆ)

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವೇ ಎಲ್ಲಾ ಮಾತನಾಡುತ್ತಿದ್ದೀರಿ. ಉತ್ತರ ಕೊಡಲಿಕ್ಕೆ ನಾವು ರೆಡಿಯಿದ್ದೇವೆ. ಅಧ್ಯಕ್ಷರು ಅವಕಾಶ ಕೊಡದಿದ್ದರೆ ನಾವು ಉತ್ತರ ಹೇಗೆ ಕೊಡುವುದು? ನೀವೇ ಏನೋ ಬೇಕೋ ಅದೆಲ್ಲಾ ಮಾತನಾಡುತ್ತೀರಲ್ಲಾ, ಉತ್ತರ ಕೊಡಲಿಕ್ಕೆ ಸರ್ಕಾರ ಸಿದ್ಧವಿದೆ. ನೀವು ಕುಳಿತುಕೊಳ್ಳಿ. ಅಧ್ಯಕ್ಷರು ಅವಕಾಶ ಕೊಡುವುದು ಬೇಡವೇ?

ಶ್ರೀ ಬಿ. ನಾಗರಾಜ ಶೆಟ್ಟಿ (ಪಶುಸಂಗೋಪನೆ, ಮೀನುಗಾರಿಕೆ ಹಾಗೂ ಮುಜರಾಯಿ ಸಚಿವರು) : ನಾವು ಉತ್ತರಿಸಲಿಕ್ಕೆ ಸಿದ್ಧರಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) : ಆಯಿತು. ಸ್ವೀಕರ್ ಉತ್ತರ ಕೊಡಿ ಎಂದು ಹೇಳಬೇಕಲ್ಲವೇ, ಮತ್ತೆ ನೀವು ಕುಳಿತುಕೊಳ್ಳಿ. ಉತ್ತರ ಕೊಡಿ ಎಂದು ನೀವು ಹೇಳಬೇಕೆ ಅಥವಾ ಸ್ಪೀಕರ್‌ರವರು ಹೇಳಬೇಕೇ? ನೋಡಿ ನಿಮ್ಮಷ್ಟೇ ಜವಾಬ್ದಾರಿ ನಮಗೂ

ಇದೆ. ನಿಮಗೆಷ್ಟು ಕನ್ನಡಿಗರ ಬಗ್ಗೆ ಅಭಿಮಾನವಿದೆಯೋ ಅಷ್ಟೇ ನಮಗೂ ಇದೆ. ಉತ್ತರ ಕೊಡಲಿಕ್ಕೆ ರೆಡಿಯಿದ್ದೇವೆ. ಸ್ಪೀಕರ್ ಅವಕಾಶ ಕೊಡಬೇಕಲ್ಲವೇ?

ಶ್ರೀ ವಾಟಾಳ್ ನಾಗರಾಜ್ : ನಾನು ಅವರಿಗೆ ಹೇಳುತ್ತಿದ್ದೇನೆ. ಇದು ಸರಿಯಲ್ಲ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು.)

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) : ವಾಟಾಳ್ ನಾಗರಾಜ್‌ರವರೇ ನೀವು ಬನ್ನಿ.

(ಅಡಚಣೆ)

ಅಧ್ಯಕ್ಷರು : ಅವರು ಅರ್ಧ ಗಂಟೆ ಕಾಲ ಚರ್ಚೆ ಮಾಡುವ ಸಲುವಾಗಿ ನೋಟೀಸ್ ಕೊಡುತ್ತೇನೆಂದು ಹೇಳಿದ್ದಾರೆ. ನಾನು ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ. ಸಮಗ್ರವಾಗಿ ಚರ್ಚೆಯಾಗಲಿ, ಸರ್ಕಾರವೂ ಉತ್ತರ ಹೇಳಲಿ.

(ಅಡಚಣೆ)

ಶ್ರೀ ಬಿ.ಎಸ್. ಯಡಿಯೂರಪ್ಪ : ಸದನದ ಕಾರ್ಯಕಲಾಪಗಳು ನಡೆಯಬೇಕಾದರೆ, ತಾವು ಬೇರೆ ರೀತಿಯಲ್ಲಿ ಹತೋಟಿಗೆ ತರಬೇಕಾಗುತ್ತದೆ. ಇದು ಕ್ರಮ ಅಲ್ಲ.

(ಅಡಚಣೆ)

ಅಧ್ಯಕ್ಷರು : ನಾನು ಕತ್ತಿ ಹಿಡಿದುಕೊಂಡು ಕುಳಿತುಕೊಳ್ಳೋಣವೇ? ಇಲ್ಲಿ ಬಂದಿರತಕ್ಕ ಎಲ್ಲರೂ ಜವಾಬ್ದಾರಿ ಇರತಕ್ಕಂಥ ಸದಸ್ಯರು. ಜವಾಬ್ದಾರಿಯಿಂದ ನಡೆದುಕೊಂಡರೆ ಎಲ್ಲವೂ ಸರಿಯಾಗಿ ನಡೆಯುತ್ತೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಅರ್ಧ ಗಂಟೆಗಳ ಕಾಲ ಚರ್ಚೆಗೆ ಅವಕಾಶ ಕೊಡುತ್ತೇನೆಂದು ಹೇಳಿದಿರಿ.

ಅಧ್ಯಕ್ಷರು : ನಾನೇನು ಮಾಡಲಿ ಹೇಳಿ? ಅವರು ಅರ್ಧ ಮಾಡಿಕೊಳ್ಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ದಾಖಲೆಗೆ ಬೇರೆ ಹೋಗಬಾರದು. ಸನ್ಮಾನ್ಯ ಪಾಟೀಲರು ಮತ್ತು ವಾಟಾಳರು ವಿಷಯ ಪ್ರಸ್ತಾಪ ಮಾಡಿದರು. ಅದರ ಪ್ರಾಮುಖ್ಯತೆ ನಮಗೆ ಗೊತ್ತಿದೆ. ಉತ್ತರ ಕೊಡುವುದಕ್ಕೆ ಸಂಬಂಧಪಟ್ಟ ಮುಜರಾಯಿ ಇಲಾಖೆಯ ಮಂತ್ರಿಗಳಾದ ನಾಗರಾಜ ಶೆಟ್ಟರು ಎದ್ದು ನಿಂತುಕೊಂಡರು. ಆ ಮೇಲೆ, ನೀವು ಅರ್ಧ ಗಂಟೆಕಾಲ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆಂದು ಹೇಳಿದಿರಿ. ನಾವು ಸುಮ್ಮನೆ ಕುಳಿತುಕೊಂಡೆವು. ಆದರೆ, ಅವರು ಸರ್ಕಾರ ಉತ್ತರ ಕೊಡುವುದಕ್ಕೇ ಸಿದ್ಧವಿಲ್ಲ. ಹೆಣ್ಣು ಮಕ್ಕಳ ಬಗ್ಗೆ ಅವರಿಗೆ ಆಸಕ್ತಿ ಇಲ್ಲ ಎಂದೆಲ್ಲಾ ಹೇಳಿದರು. ಏಕೆಂದರೆ, ನಾವು ಉತ್ತರ ಕೊಡಲು ಸಿದ್ಧರಿದ್ದೇವೆ.

ಅಧ್ಯಕ್ಷರು : ಅದು ಸರಿಯಲ್ಲ. ಈಗ ಮಾನ್ಯ ಶಂಕರಮೂರ್ತಿಯವರು ವಿಧೇಯಕವನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳೋಣ.